OBITUARY RESOLUTION

Re : Demise of Sri Fakruddin Ali Ahmed, President of India.

SRI D. DEVARAJ URS (Chif Minister)—Madam Speaker, I beg to move the following Resolution.

> "That this House places on record its profound sense of sorrow on the demise of Sri Fakruddin Ali Ahmed, President of India, on 11th February 1977 and conveys its deep sympathies to the members of the bereaved family."

MADAM SPEAKER—Resolution moved :

> "That this House places on record its profound sense of sorrow on the demise of Sri Fakruddin Ali Ahmed, President of India on 11th February 1977 and conveys its deep symathies to the members of the bereaved family."

† SRI D. DEVARAJ URS—Madam Speaker, Now I would like to say a few words about our late President who in many ways represented all that was in the best in the Indian heritage. Fakruddin Saheb was a gentleman to the core who embodied the value of humanism, secularism, and a deep commitment to social justice and to democracy. He was a true patriot who played a very great role in the freedom struggle in Assam, his home State, and latter as a Minister of Assam, a a Member of the Union Government, and as an appropriate culmination of his distinguished career in the highest office of land, as President of India.

Shri Fakhruddin Ali Ahmed, early in his life, not only identified himself totally with the movement for national freedom, but resolutely fought against the injection of communalism into the body-politics of Assam and of the country. He was thus a dedicated upholder of the principle of secularism which is also in conformity with the goal of socio-economic justice He cared deeply for the have-nots and the under-privileged and made a significant contribution to the advancement of this objectives namely, the amelioration of the conditions of the weaker sections to which all of us are committed.

Shri Fakhruddin Ali Ahmed also made a deep impact on many other facts of our national life, such as the world of art and culture and in the sphere of sports. He had a very perceptive understanding of the values of poetry, music, dance, sculpture and

---

† indicate that remarks or speeches have not been revised by the member concerned.

theatre and his enthusiasm for the promotion of sports is well-known and contributed to the revival of sports in general throughout the country.

Shri Fakhrudin Ali Ahmed held his high office with grace and dignity and in all his dealings with his fellowmen, he displayed warmth, sympathy and understanding, and especially a profound concern for the welfare of the downtrodden.

In his tragic demise, the country has lost an illustrious son, who served high public causes with marked distinction urbanity and grace I am sure all members of this house will join me in paying homage to the memory of this outstanding Indian and convey our heartfelt condolences to Begum Abida and members of the bereaved family.

† ಶ್ರೀ ಎಂ. ಎಸ್. ಕೃಷ್ಣನ್ (ಶಂಲ್ಲೀಶ್ವರಂ)—ಸನ್ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಫಕ್ರುದ್ದೀನ್ ಅಲಿ ಅಹಮದ್ ಅವರು ನಿಧನರಾಗಿ ಸುಮಾರು ಒಂದೂವರೆ ತಿಂಗಳು ಆಯಿತು. ಆದರೂ ಸಹ ನಾವು ಈ ಸಂದರ್ಭದಲ್ಲಿ ಅವರನ್ನು ಎರಡು-ಮೂರು ಕಾರಣಗಳಿಂದಾಗಿ ನೆನಸಿಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ಜನ ಮುಸ್ಲಿಂ ನಾಯಕರುಗಳು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದಾರೆ. ನಮ್ಮ ದೇಶದಲ್ಲಿ ಹಿಂದುಗಳು ಮತ್ತು ಮುಸಲ್ಮಾನರು ಐಕ್ಯದಿಂದ ಇರಬೇಕೆಂದು ಹೋರಾಟ ನಡೆಸಿದಂಥ ಮುಸ್ಲಿಂ ನಾಯಕರುಗಳು ಇದ್ದರು ಮತ್ತು ಈಗ ಇದ್ದಾರೆ. ಹಳೆಯ ಸಾಮ್ರಾಜ್ಯಶಾಹಿ ಆಡಳಿತದ ವಿರುದ್ಧ ಹೋರಾಟ ನಡೆಸಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ ಆ ಒಂದು ಪೀಳಿಗೆಗೆ ಸೇರಿದಂಥವರು ನಮ್ಮ ಫಕ್ರುದ್ದೀನ್ ಅಲಿ ಅಹಮದ್ ಅವರು. ನಾವು ಅವರನ್ನು ಇವತ್ತಿನ ದಿವಸ ಸ್ಮರಿಸಿಕೊಳ್ಳಬೇಕಾಗಿದೆ. ಆದರೂ ಸಹ ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿಯು ದಬ್ಬಾಳಿಕೆ ಇನ್ನೂ ತಪ್ಪಿಲ್ಲ, ಅದರ ಬಗ್ಗೆ ಯೋಜನೆ ಮಾಡುವುದು ಅತಿ ಮುಖ್ಯವಾಗಿದೆ. ನಮ್ಮ ಮಾನ್ಯ ಪ್ರಧಾನಿ ಮಂತ್ರಿಗಳು ಹೇಳಿದ ಹಾಗೆ ಹಿಂದೂ ಮುಸ್ಲಿಂ ಕೋಮುವಾರು ಘರ್ಷಣೆ ನಡೆದಾಗ, ಅವರು ಎಷ್ಟು ದೂರದಿಂದ ಇದ್ದು ಸಮಸ್ಯೆಯನ್ನು ಧೈರ್ಯದಿಂದ ಎದುರಿಸಿದರು ಎನ್ನುವುದು ಮುಖ್ಯ. ಪಶ್ಚಿಮ ಬಂಗಾಲದಲ್ಲಿ ನಡೆದಂಥ ಕೋಮುವಾರು ಘರ್ಷಣೆಯಲ್ಲಿ ಅವರು ಮಹತ್ತರವಾದ ಪಾತ್ರವನ್ನು ವಹಿಸಿದರು ಇದು ಮಾತ್ರವಲ್ಲ, ಅವರು ಹಿಂದು ಮುಸ್ಲಿಂ ಜನಗಳ ಪ್ರೀತಿಯನ್ನು ಗಳಿಸಿದಂಥ ಮೇಧಾವಿಗಳಾಗಿದ್ದರು. ಇಂಥ ನಾಯಕರನ್ನು ಕಳೆದುಕೊಂಡಿರುವುದು ನಮಗೆ ಅಪಾರ ನಷ್ಟವಾಗಿದೆ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದು ಪಾತ್ರವಲ್ಲ ಅವರನ್ನು ನಾವು ಎಂದೂ ಸ್ಮರಿಸಬೇಕಾಗಿದೆ. ಅವರ ಹಸ್ತಿರ ಯಾರು ಹೋದರೂ, ಅವರು ಉನ್ನತ ಸ್ಥಾನದಲ್ಲಿದ್ದರೂ ಎಲ್ಲರನ್ನೂ ಒಂದೇ ರೀತಿಯಲ್ಲಿ ಮಾತನಾಡಿಸುತ್ತಿದ್ದರು. ಇಂಥವರು ನಮ್ಮ ದೇಶದ ರಾಷ್ಟ್ರಪತಿಗಳಾಗಿದ್ದು ನಮ್ಮ ದೇಶಕ್ಕೆ ಹೆಚ್ಚಿನ ಗೌರವವನ್ನು ತಂದಿದ್ದಾರೆ. ಅವರ ನಿಧನದ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ತಂದಿತಕ್ಕಂಥ ನಿರ್ಣಯಕ್ಕೆ ನನ್ನ ಅನುಮೋದನೆಯನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಂಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷಣೀಯರವರೇ, ನಮ್ಮ ರಾಷ್ಟ್ರಪತಿಗಳಾಗಿದ್ದಂಥ ಶ್ರೀಮಾನ್ ಫಕ್ರುದ್ದೀನ್ ಅಲಿ ಅಹಮದ್ ಅವರು ನಿಧನರಾದ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಸಂತಾಪಸೂಚಕ ನಿರ್ಣಯಕ್ಕೆ ಬೆಂಬಲ ಸೂಚಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನಮ್ಮ ಹಿರಿಯ ಗೆಳೆಯರಾದಂಥ ಶ್ರೀಮಾನ್ ಕೃಷ್ಣನ್ ಅವರು ಹೇಳಿದಂತೆ ದಿವಂಗತ ರಾಷ್ಟ್ರಪತಿಗಳು ಸರ್ವ ಧರ್ಮ ಸಮಭಾವನೆಯ ಪ್ರತೀಕವಾಗಿದ್ದರು ಅವರ ಸೇವೆ ಈ ದೇಶದಲ್ಲಿ ಚಿರಸ್ಮರಣೀಯವಾಗಿದೆ ಎನ್ನುವುದನ್ನು ನಾವು ನೆನಪಿನಲ್ಲಿಡಬೇಕಾಗುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ ಅವರ ಆಕಸ್ಮಿಕ ನಿಧನದಿಂದಾಗಿ ನಮ್ಮ ದೇಶಕ್ಕೆ ಬಹಳ ದೊಡ್ಡ ನಷ್ಟವಾಗಿದೆ. ಅವರಿಗೆ ಆರೋಗ್ಯ ಸರಿಯಾಗಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಅವರನ್ನು ಇಂಥ ಸಮಯದಲ್ಲಿ ಹೊರದೇಶಕ್ಕೆ ಕಳಿಸಿಸಬೇಕಾದಂಥ ಅವಶ್ಯಕತೆ ಏಕೆ ಒಂತಂ ಎನ್ನುವ ಬಗ್ಗೆ ಇನ್ನೂ ನಮಗೆ ಗೊತ್ತಿಲ್ಲ. ಅವರು ಇಂಥ ಅನಾರೋಗ್ಯ ಸ್ಥಿತಿಯಲ್ಲಿಯೂ ಹೊರ ದೇಶಕ್ಕೆ ಹೋಗಿ ನಮ್ಮ ದೇಶದ ಗೌರವವನ್ನು ಉನ್ನತ ಮಟ್ಟಕ್ಕೆ ತರಲಿಕ್ಕೆ ಸಹಾಯ

ಮಾಡಿದ್ದಾರೆ. ಅವರು ನಿಧನರಾದ ಹಿಂದಿನದಿನ ದೆಹಲಿಗೆ ಬಂದಾಗ ಹರ್ಷಚಿತ್ತರಾಗಿದ್ದರು ಎಂಬ ವರದಿಯನ್ನು ನಾವೆಲ್ಲರೂ ಓದಿದ್ದೇವೆ ಮತ್ತು ಕೇಳಿದ್ದೇವೆ. ಇಂಥ ಅವರ ಭಾವ ಚಿತ್ರವನ್ನು ನಾವು ನೋಡಿದ್ದೇವೆ ಮಾರನೆಯ ದಿವಸ ಬೆಳಿಗ್ಗೆ ಅವರು ನಿಧನರಾಗಿದ್ದಾರೆ ಎನ್ನುವ ವಿಷಯ ನಮಗೆ ದಿಗ್ಭ್ರಾಂತಿಯನ್ನುಂಟು ಮಾಡಿದೆ. ೫೬೦ ಕೊಠಡಿಗಳಿರತಕ್ಕ ರಾಷ್ಟ್ರಪತಿಭವನದಲ್ಲಿ ಅನಾರೋಗ್ಯವಾಗಿದ್ದಂಥ ರಾಷ್ಟ್ರಪತಿಯವರನ್ನು ನೋಡಿಕೊಳ್ಳುವುದಕ್ಕೆ ವೈದ್ಯರು ಇರಲಿಲ್ಲವೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಬರಕತ್ತದೆ. ಇಂಥ ಲೋಪದೋಷಗಳು ಇನ್ನು ಮುಂದೆ ಆಗಬಾರದು. ಆದೇ ರೀತಿ ತಾಷ್ಕೆಂಟಿನಲ್ಲಿ ನಿಧನರಾದ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಬಗ್ಗೆ ಕೂಡ ಇಂಥ ಶಂಕೆ ಆಗ ಬಂದಿತ್ತು ಎಂದು ತಮಗೆ ನೆನಪು ಮಾಡಿಕೊಡಲಿಕ್ಕೆ ಅಪೇಕ್ಷಿಪಡುತ್ತೇನೆ. ಹೃದಯಾಘಾತದಿಂದ ನರಳುತ್ತಿದ್ದ ರಾಷ್ಟ್ರಪತಿಗಳನ್ನು ೨೪ ಗಂಟೆಗಳವರೆಗೆ ನೋಡಿಕೊಳ್ಳುವ ವ್ಯವಸ್ಥೆ ಇರಲಿಲ್ಲ ಎನ್ನುವುದು ಅತ್ಯಂತ ಸೋಜಿಗದ ಮತ್ತು ವಿಸ್ಮಯಕಾರಕವಾದ ವಿಚಾರ.

ಇದಕ್ಕೆ ಆಧಾರ ಏನೆಂದರೆ ಮರುದಿನವೇ ಅವರು ಹೃದಯಾವೇದನೆಗೆ ಬಿದ್ದಾಗ ಅವರ ಆರೋಗ್ಯವನ್ನು ವಿಚಾರಿಸಲು ಹೊರಗಿನಿಂದ ವೈದ್ಯರನ್ನು ಕರೆತರುವುದಕ್ಕೆ ೧೦ ನಿಮಿಷಗಳ ಕಾಲ ಹೆಚ್ಚು ಹಿಡಿಯಿತು. ಅಂದಿನ ದಿನ ಮಾಜೀ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಸಹಾ ರಾಷ್ಟ್ರಪತಿಯವರ ಹತ್ತಿರ ಇದ್ದರು ಅನ್ನುವ ಸುದ್ದಿಯನ್ನು ಓದಿದ್ದೇನೆ. ಕೇಂದ್ರ ಸರ್ಕಾರವೇ ಆಗಲಿ ರಾಜ್ಯ ಸರ್ಕಾರವೇ ಆಗಲಿ ಭಾರತೀಯರ ಬಗ್ಗೆ ಅಥವಾ ಸಾಮಾನ್ಯ ನಾಗರೀಕನ ಬಗ್ಗೆ ತೋರಿಸಬೇಕಾದಂಥಾ ಕಾಳಜಿಯನ್ನು ಅವರ ಆರೋಗ್ಯದ ಬಗ್ಗೆ ಜವಾಬ್ದಾರಿ ಹೊರಬೇಕಾಗಿತ್ತು. ದಿವಂಗತ ಫಕ್ರುದ್ದೀನ್ ಆಲಿ ಅಹಮದ್‌ರವರು ನಮ್ಮ ಭಾರತ ದೇಶಕ್ಕೆ ಅಪೂರ್ವವಾದ ಕಾರಣಕ್ಕೆಯಾಗಿ ಬಂದಿದ್ದರು ಮತ್ತು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಂಥಾ ಮೌಲಾನ್ ಅಜಾದ್‌ರವರು ಏನು ಇದ್ದರೋ ಅವರಿಗೆ ಸರಿಸಮಾನಾಗಿ ಇದ್ದರು. ಅವರ ನಿರ್ಲಿಪ್ತ ಮನೋಭಾವ ಮತ್ತು ನಿಷ್ಪಕ್ಷಪಾತ ಬುದ್ಧಿ ಏನು ಇದೆಯೋ ಅದು ನಮಗೆ ದಾರೀ ದೀಪವಾಗಿರಲಿ ಎಂದು ಹಾರೈಸುತ್ತೇನೆ ಮತ್ತು ಅವರು ಇದ್ದಂಥ ಸ್ಥಾನದ ಅಧಿಕಾರಾವಧಿಯಲ್ಲಿ ಅದನ್ನು ದುರುಪಯೋಗಪಡಿಸಿಕೊಂಡಿರತಕ್ಕಂಥಾ ಜನರೂ ಇದ್ದಾರೆ. ಅವರಿಗೆ ಮನಸ್ಸಿತೊ ಇಲ್ಲವೋ ಅಥವಾ ಯಾವ ಒತ್ತಾಯಕ್ಕೆ ಮಣಿದರೋ ಅಂತು ೨ ದಿವಸ ಮುಂಚಿತವಾಗಿ ತುರ್ತು ಪರಿಸ್ಥಿತಿಯ ಒಂದು ಆಜ್ಞೆಗೆ ರಾಜು ಹಾಕಿದರು. ಅದೇನೇ ಇರಲಿ ಈಗ ಅವರ ನಿಧನದ ಬಗ್ಗೆ ಏನು ಒಂದು ಸಂತಾಪ ಸೂಚಕ ನಿರ್ಣಯ ತಂದಿದ್ದಾರೋ ಅದನ್ನು ಹೃತ್ಪೂರ್ವಕವಾಗಿ ಅನುಮೋದಿಸಿ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್.ಮೈ. ಪಾಟೀಲ್(ಸಿಂದಗಿ).—ಮಾನ್ಯ ಸಭಾಧ್ಯಕ್ಷಣಿಯರೇ, ಈಪೊತ್ತು ಭಾಷಣ ಮಾಡತಕ್ಕಂಥಾ ಸನ್ನಿವೇಶ ನಮಗೆ ಅಷ್ಟೇ ಅಲ್ಲ ಇಡೀ ಭಾರತೀಯರಿಗೆ ಒಂದು ದುಃಖದ ಸಂಗತಿ ಎಂದು ಹೇಳಬಯಸುತ್ತೇನೆ. ನಮ್ಮ ದೇಶವನ್ನು ಭಾರತದ ಸಂಸ್ಕೃತಿಯಲ್ಲಿ ಮತ್ತು ರಾಷ್ಟ್ರ ಜೀವನದಲ್ಲಿ ಹೋಲಿಸಿದರೆ ಈ ದೇಶದಲ್ಲಿ ಹಿಂದೂಗಳು ಇದ್ದಾರೆ, ಮುಸ್ಲಿಮರು ಇದ್ದಾರೆ ಕ್ರೈಸ್ತರೂ ಎಲ್ಲರೂ ಇದ್ದಾರೆ ಆದರೆ ಅವರೆಲ್ಲರೂ ಜಾತ್ಯತೀತ ಭಾವನೆಯನ್ನು ಹೊಂದಿ ಇಡೀ ಭಾರತ ದೇಶಕ್ಕೆ ಕಲ್ಯಾಣವಾಗಲಿ ಅಂತ ಹೇಳತಕ್ಕಾಂಥಾ ಮಹಾನುಭವರು ಅಷ್ಟೇ ಅಲ್ಲ ಖಾನ್ ಅಬ್ದುಲ್ ಗಫಾರ್ ಖಾನ್‌ರವರು ಪರದೇಶದಲ್ಲಿ ಇವರನ್ನು ಕಣ್ಣಾರೆ ನೋಡಿದಾಗ ಫಕ್ರುದ್ದೀನ್ ಆಲಿ ಅಹಮದ್‌ರವರು ಭಾರತೀಯರೋ ಮುಸ್ಲಿಮರೋ ಹೇಳಲಿಕ್ಕೆ ಬರುವುದಿಲ್ಲ ಎಂದು ಅವರೇ ಹೇಳಿದ್ದಾರೆ. ಇವರಲ್ಲಿ ಯಾವ ಸಂಕುಚಿತ ಭಾವನೆಯೂ ಇಲ್ಲ. ಯಾರೇ ಆಗಲಿ ಪರದೇಶಕ್ಕೆ ಹೋದಾಗ ಜಾತ್ಯತೀತ ಭಾವನೆಯನ್ನು ಕೇಳಿದೇ ಬಿಟ್ಟಿರಲಾರರು. ಅಂಥಾದರಲ್ಲಿ ಇವರು ಅದಕ್ಕೆ ಆಸ್ಪದ ಕೊಡದೇ ಇರತಕ್ಕಂಥಾ ರೀತಿಯಲ್ಲಿ ನಡೆದುಕೊಂಡು ಒಂದು ಮಾದರಿಯಾದ ರೀತಿಯಲ್ಲಿ ಜಾತ್ಯಾತೀತ ಮನೋಭಾವವನ್ನು ಎತ್ತಿ ಹಿಡಿದಿದ್ದಾರೆ ಈವೊತ್ತಿನ ದಿವಸ ಅವರ ಬಗ್ಗೆ ಟೀಕಿಸುವವರೂ ಇದ್ದಾರೆ ವರ್ಣಿಸುವವರು ಇದ್ದಾರೆ**ಆದೇ**ನೇ ಇರಲಿ ರಾಷ್ಟ್ರೀಯ ಸಂಸ್ಕೃತಿಯನ್ನು ಎತ್ತಿ ಹಿಡಿದು ಭಾರತೀಯರು ಎಂದು ಮೆರೆದು ಹಿಂದೂ ಮುಸ್ಲಿಂ ಐಕ್ಯತೆಗಾಗಿ ಶ್ರಮಿಸಿದ್ದಾರೆ. ಇದನ್ನು ಮೆಚ್ಚೇ ಅವರನ್ನು ಈ ಒಂದು ರಾಷ್ಟ್ರಪತಿ ಸ್ಥಾನಕ್ಕೆ ನೇಮಿಸಿದುದು ಅತಿ ಮುಖ್ಯವಾದದ್ದು. ಇಂಥಾ ಮಹಾಗುಣಗಳು ಏನು ಇವೆ ಅದನ್ನು ನಾವು ನೋಡಬೇಕು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಒಂದು ಸಂತಾಪ ಸೂಚನೆಯನ್ನು ತಂದಿದ್ದಾರೋ ಅದನ್ನು ನಾವು ಹೃತ್ಪೂರ್ವಕವಾಗಿ ಅನುಮೋದಿಸಿದ್ದೇವೆ, ಅಷ್ಟೇ

ಅಲ್ಲಿ ಅವರ ಕುಟುಂಬದ ದುಃಖದಲ್ಲೂ ಕೂಡ ನಾವೆಲ್ಲರೂ ಭಾಗಿಯಾಗಿದ್ದೇವೆ, ಅಷ್ಟೇ ಅಲ್ಲ ಈವೊತ್ತಿನ ದಿವಸ ಅವರ ಕುಟುಂಬಕ್ಕೆ ಆದಂಥ ಅಪಾರವಾದ ನಷ್ಟ ಭಾರತಕ್ಕೂ ಆಗಿದೆ ಮತ್ತು ನಮ್ಮ ಭಾರತದ ಒಂದು ಸಂಸ್ಕೃತಿಗೂ ಕೂಡ ಒಂದು ದೊಡ್ಡ ಪೆಟ್ಟು ಬಿದ್ದಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಫೋರ್ಟ್).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗಾಗಲೇ ಎರಡು ಸ್ನೇಹಿತರೂ ಕೂಡ ನಮ್ಮ ರಾಷ್ಟ್ರಾಧ್ಯಕ್ಷರಾಗಿದ್ದಂಥಾ ದಿವಂಗತ ಫಕ್ರುದ್ದೀನ್ ಆಲಿ ಅಹಮದ್‌ರವರ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ ದಿವಂಗತ ಫಕ್ರುದ್ದೀನ್ ಆಲಿ ಅಹಮದ್‌ರವರು ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮತ್ತು ರಾಷ್ಟ್ರ ವಿಭಾಗವಾದಂಥಾ ಸಂದರ್ಭದಲ್ಲಿ ಪ್ರತಿಯೊಬ್ಬ ಭಾರತೀಯನಂತೆ ನಡೆದುಕೊಂಡಂಥಾ ಮಹಾ ವ್ಯಕ್ತಿ. ಅವರು ಅನೇಕ ಗುಣಗಳನ್ನು ಹೊಂದಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಹಿಂದೂಗಳು ಮತ್ತು ಮುಸ್ಲಿಮರು ಒಂದು ಸೇತುವೆ ರೂಪದ ಹಾಗೆ ಇರಬೇಕೆಂದು ಬೆಳೆಸಿದಂಥಾ ಮಹಾ ಪುರುಷರು ಇವರು. ಇಂಥಾ ದೊಡ್ಡ ಮಹಾನುಭಾವರು ರಾಷ್ಟ್ರವನ್ನು ಇನ್ನು ಹೆಚ್ಚಾಗಿ ಬೆಳೆಸಬೇಕಾದಂಥಾ ಮುಖ್ಯವಾದ ಕಾಲದಲ್ಲಿ ರಾಷ್ಟ್ರದ ಸಮಸ್ಯೆ ಬಗ್ಗೆ ಇಂದು ಮಾರ್ಗದರ್ಶನ ಮಾಡುವ ಕಾಲದಲ್ಲಿ ಕಣ್ಮರೆಯಾಗಿರುವದು ಬಹಳ ಶೋಚನೀಯವಾದ ವಿಚಾರ ಒಟ್ಟಿನಲ್ಲಿ ಹೇಳಬೇಕಾದರೆ ದಿವಂಗತ ಫಕ್ರುದ್ದೀನ್ ಆಲಿ ಅಹಮದ್‌ರವರು ಒಬ್ಬ ಮಹಾ ದೊಡ್ಡ ವ್ಯಕ್ತಿ. ಇಂಥಾವರು ನಮ್ಮ ಭಾರತದಲ್ಲಿ ಇದ್ದುದು ಒಂದು ದೊಡ್ಡ ಹೆಮ್ಮೆ. ಅಂಥಾವರು ಇಂದು ಕಣ್ಮರೆಯಾಗಿರುವುದು ಬಹಳ ಶೋಚನೀಯ ಎಂದು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ ಮತ್ತು ಅವರ ಕುಟುಂಬಕ್ಕೆ ಆದಂಥಾ ಅಪಾರ ಹೆಟ್ಟು ಏನು ಬಿದ್ದಿದೆ ಅದನ್ನು ತಡೆಯುವ ಶಕ್ತಿ ಅವರಿಗೆ ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI B. B. SAYANAK (Belgaum).—Madam Speaker, I rise to support the Condolence Resolution placed before the House by the Hon. Chief Minister regarding the demise of Sri Fakruddin Ali Ahmed. The late Sri Fakruddin Ali Ahmed was born in the year 1905 in Delhi. He was a graduate of the Cambridge University. He started practice as a Lawyer in the Punjab High Court but gave up the lucrative practice and entered the Congress Party in the year 1931. When the Muslim League was in full swing he opposed it in 1946. He was a true nationalist and he devoted his life for the nation. He was a member of the Rajya Sabha for many years. He was also a Minister in the Central Cabinet and the fifth President of India. He was a true nationalist. I say all this on behalf of my party, Maharashtra Ekikarna Samithi, and pay my homage to the late Sri Fakruddin Ali Ahmed.

MADAM SPEAKER.—I associate myself with the views and sentiments expressed by the Hon'ble Leader of the House and other hon'ble Members. I request the hon'ble Members to stand in silence for a minute.

The Resolution is.—

> "That this House places on record its profound sense of sorrow on the demise of Sri Fakruddin Ali Ahmed, President of India on 11th February 1977 and conveys its deep sympathies to the members of the bereaved family."

The Resolution was adopted nem-con the House Standing in silence for a minute